## ವಿಶೇಷ ಸೂಚನೆ

- ಶ್ರೀಮತ್ಪರಮಹಂಸ ಪರಿವ್ರಾಜಕಾಚಾರ್ಯ ಸದ್ಗುರು ಭಗವಾನ್ ಶ್ರೀ ಶ್ರೀಧರಸ್ವಾಮಿಗಳವರ ಪಾದುಕಾ ಪೂಜೆಯನ್ನು ಸ್ವಹಸ್ತದಿಂದ ಮಾಡಲು ಅವಕಾಶವಿರುತ್ತದೆ.
- ಶ್ರೀ ಶ್ರೀಧರಸ್ವಾಮಿಗಳವರ ಪಾದುಕಾ ಮಂದಿರ-ವಸಂತಪುರ, ಬೆಂಗಳೂರು; ಶ್ರೀಗಳ ಜನ್ಮಸ್ಥಳ ಲಾಡಚಿಂಚೋಳಿ ಮತ್ತು ಶ್ರೀ ಶ್ರೀಧರ ಸ್ಫೂರ್ತಿ ನಿವಾಸ, ವಾರಾಣಾಸಿಯಲ್ಲಿ ಶ್ರೀ ಶ್ರೀಧರ ದತ್ತ ಜಯಂತಿ ಉತ್ಸವಗಳು ನಡೆಯುತ್ತವೆ.
- ವರದಪುರದ ಶ್ರೀ ಶ್ರೀಧರಾಶ್ರಮದಲ್ಲಿ ಭೋಜನಶಾಲೆ ಹಾಗೂ ವಾರಾಣಾಸಿಯಲ್ಲಿ ಶ್ರೀ ಶ್ರೀಧರ ಸ್ಫೂರ್ತಿ ನಿವಾಸ ಕಟ್ಟಡ ಕೆಲಸಗಳು ಪ್ರಾರಂಭವಾಗಿರುತ್ತವೆ. ಈ ಪುಣ್ಯ ಕಾರ್ಯಕ್ಕೆ ಭಕ್ತಾದಿಗಳು ಎಲ್ಲಾ ರೀತಿಯ ಸೇವಾ ಸಹಕಾರಗಳನ್ನು ನೀಡಲು ಅವಕಾಶವಿರುತ್ತದೆ. ಈ ಬಗ್ಗೆ ಕಾರ್ಯಾಲಯವನ್ನು ಸಂಪರ್ಕಿಸಿ ವಿವರ ಪಡೆಯಲು ವಿನಂತಿಸಿದೆ.
- ಶ್ರೀ ಶ್ರೀಧರಾಶ್ರಮದಲ್ಲಿ ನಡೆಯುವ ವಿದ್ಯಮಾನಗಳ ಮಾಹಿತಿಗಾಗಿ ನಮ್ಮ ಫೇಸ್‌ಬುಕ್ ಪೇಜ್ **https://www.facebook.com/Shri Shridharashrama-Varadapura 1476750975940437** ನ್ನು **Like** ಮಾಡಬೇಕಾಗಿ ವಿನಂತಿ.
- ಮಿಂಚಂಚೆ(ಇ-ಮೇಲ್) ಹೊಂದಿರುವ ಭಕ್ತಾದಿಗಳು ತಮ್ಮ ಇ-ಮೇಲ್ ವಿಳಾಸವನ್ನು ಆಶ್ರಮಕ್ಕೆ ನೀಡಿದಲ್ಲಿ ಆಶ್ರಮದಲ್ಲಿ ನಡೆಯುವ ಉತ್ಸವಗಳ ಆಹ್ವಾನ ಪತ್ರಿಕೆಗಳನ್ನು ಕಳುಹಿಸಲು ಅನುಕೂಲವಾಗುತ್ತದೆ.
- ಬ್ಯಾಂಕ್‌ಗಳ ಮೂಲಕ ಪೂಜಾ ಸೇವೆಗಳಿಗೆ ಹಣ ಸಂದಾಯ ಮಾಡುವವರು ಈ ಕೆಳಗಿನ ಬ್ಯಾಂಕ್ ಖಾತೆಗೆ ಹಣ ಸಂದಾಯ ಮಾಡಿ, ಆಶ್ರಮಕ್ಕೆ ಅಂಚೆ, ಇ-ಮೇಲ್, ವಾಟ್ಸಾಪ್ **(8762716698)** ಮೂಲಕ ವಿವರಗಳನ್ನು ದಯಮಾಡಿ ನೀಡಬೇಕಾಗಿ ಕೋರಿದೆ.

**STATE BANK OF INDIA, SAGAR**
S.B A/c No : 54037006634
IFSC CODE : SBIN0040136

**KARNATAKA BANK LTD, SAGAR**
S.B A/c No : 7122500100961301
IFSC CODE : KARB0000712

**CANARA BANK, SAGAR**
S.B A/c No : 0574101002328
IFSC CODE : CNRB0000574

---

ತೆರದ ಅಂಚೆ


**ಶ್ರೀ ಶ್ರೀಧರ ಸೇವಾ ಮಹಾಮಂಡಲ (ರಿ.)**
**ಶ್ರೀ ಶ್ರೀಧರಾಶ್ರಮ-ಶ್ರೀಕ್ಷೇತ್ರ ವರದಪುರ**
ಯಡಜಿಗಳೇಮನೆ ಅಂಚೆ, ಸಾಗರ ತಾ : 577401
ದೂರವಾಣಿ : 08183-236166, 296583
shriashrama@gmail.com/info@shrishridhara.org
www.shrishridhara.org


# ಕೃಷ್ಣ ಯಜುರ್ವೇದ ಸಂಪೂರ್ಣ ಜಟಾಪಾರಾಯಣ

ಡಿಸೆಂಬರ್ 05: 2018ನೇ ಬುಧವಾರದಿಂದ
ಡಿಸೆಂಬರ್ 19: 2018ನೇ ಬುಧವಾರದವರೆಗೆ

# ಶ್ರೀದತ್ತ ಶ್ರೀ ಶ್ರೀಧರಸ್ವಾಮಿಗಳವರ ಜಯಂತಿ ಮಹೋತ್ಸವ

ಡಿಸೆಂಬರ್ 16: 2018ನೇ ಭಾನುವಾರದಿಂದ
ಡಿಸೆಂಬರ್ 23: 2018ನೇ ಭಾನುವಾರದವರೆಗೆ

**ಶ್ರೀ ಶ್ರೀಧರಾಶ್ರಮ – ಶ್ರೀಕ್ಷೇತ್ರ ವರದಪುರದಲ್ಲಿ**

ಶ್ರೀಮತಿ -ಶ್ರೀ

॥ಓಂ ನಮೋ ಭಗವತೇ ಶ್ರೀಧರಾಯ॥

## "ಶ್ರೀಮತ್ಪರಮಹಂಸ ಪರಿವ್ರಾಜಕಾಚಾರ್ಯ ಸದ್ಗುರು ಭಗವಾನ್ ಶ್ರೀ ಶ್ರೀಧರಸ್ವಾಮಿಗಳವರ 110ನೇ ಜಯಂತಿ ಮಹೋತ್ಸವ"ದ ಅಂಗವಾಗಿ

## "ಕೃಷ್ಣಯಜುರ್ವೇದ ಸಂಪೂರ್ಣ ಜಟಾಪಾರಾಯಣ"

ಶ್ರೀ ಗುರು ಭಕ್ತರಲ್ಲಿ ವಿಜ್ಞಾಪನೆಗಳು.

ವರದಹಳ್ಳಿಯ ಶ್ರೀ ಶ್ರೀಧರಾಶ್ರಮವು ನೂರಾರು ವೇದಾಧ್ಯಾಯಿಗಳನ್ನು ನಮ್ಮ ಸಮಾಜಕ್ಕೆ ಸಮರ್ಪಿಸಿ ಧರ್ಮದೀಪವೆನಿಸಿದೆ. ಗುರುಗಳ ಮಹತ್ತರ ಸಂಕಲ್ಪದಂತೆ ಆರಂಭವಾದ ಶ್ರೀ ಶ್ರೀಧರ ಸಾಂಗವೇದ ವಿದ್ಯಾಲಯವು ಅನೇಕ ವಿದ್ಯಾರ್ಥಿಗಳಿಗೆ ವೇದಮಾತೆಯ ಸೇವೆಯನ್ನು ತ್ರಿಕರಣಪೂರ್ವಕವಾಗಿ ಮಾಡುವುದಕ್ಕೆ ಅವಕಾಶವನ್ನು ನೀಡಿದ ಪುಣ್ಯಭೂಮಿಯಾಗಿದೆ. ಶ್ರೀ ಭಗವಾನರ ಪ್ರತ್ಯಕ್ಷ-ಪರೋಕ್ಷ ಅನುಭೂತಿಯ ದಿವ್ಯಾನುಭವವನ್ನು ಉಣ್ಣುವ ಸೌಭಾಗ್ಯೋದಯವಾಗಿ ಇಲ್ಲಿಯ ಹಳೇ ವಿದ್ಯಾರ್ಥಿಗಳ ಸಂಘವು ದತ್ತ ಜಯಂತಿಯ ಶುಭಾವಸರದಲ್ಲಿ ಶ್ರೀಗುರುಗಳ ದಿವ್ಯಸಾನ್ನಿಧ್ಯದಲ್ಲಿ ಕೃಷ್ಣಯಜುರ್ವೇದ ಸಂಪೂರ್ಣ ಜಟಾಪಾರಾಯಣವನ್ನು ಸಂಕಲ್ಪಿಸಿದೆ.

ಯೋ ಜಟಾಮಾತ್ರವಿದ್ಬ್ರಹ್ಮ ಸಂಧಿಜ್ಞೋ ವಿಷ್ಣುರುಚ್ಯತೇ ।
ಈಶ್ವರಃ ಸರ್ವಸಂಧಿಜ್ಞ ಇತ್ಯೇವರ್ಷಿಭಿರೀರಿತಃ ॥

ಜಟಾದಿವಿಕೃತೀನಾಂ ಯೇ ಪಾರಾಯಣಪರಾಯಣಾಃ ।
ಮಹಾತ್ಮಾನೋ ದ್ವಿಜಶ್ರೇಷ್ಠಾಃ
ತೇ ಜ್ಞೇಯಾಃ ಪಙ್ಕ್ತಿಪಾವನಾಃ ॥

ಘನಪಾರಾಯಣಂ ಯಸ್ತು
ಸಕೃತ್ಕುರ್ಯಾದ್ದ್ವಿಜೋತ್ತಮಃ ।
ಸ ವೈ ಬ್ರಹ್ಮ ಸ ವೈ ವಿಷ್ಣುಃ
ಸ ವೈ ರುದ್ರೋ ನ ಸಂಶಯಃ ॥

ಕೋಟಿಜನ್ಮಕೃತಂ ಪಾಪಂ
ಬ್ರುವತಾಂ ನಶ್ಯತಿ ಕ್ಷಣಾತ್ ।
ಶೃಣ್ವಂತಶ್ಶ್ರದ್ಧಯಾ ಭಕ್ತ್ಯಾ
ಸಹಸ್ರಾಣಾಂ ಗವಾಂ ಫಲಮ್ ॥

ಲಭೇರನ್ನ್ ದಾನಜಂ ತಸ್ಯ
ಪಾಠಕಾನಾಂ ಪೂಜನಮ್ ।
ಯಃ ಕರೋತಿ ಶಿವಸ್ಥಾನಂ
ಲಭತೇ ನಾತ್ರ ಸಂಶಯಃ ॥

ಪಠತಾಂ ಶ್ರದ್ಧಯಾ ಪೂಜಾಂ
ಯಃ ಕರೋತಿ ನರೋತ್ತಮಃ ।
ಬ್ರಹ್ಮಲೋಕನಿವಾಸೀ ಸನ್ನ್
ಬ್ರಹ್ಮಣಾ ಸಹ ಮೋದತೇ ॥

ಪಠತಾಂ ಶೃಣ್ವತಾಂ ಚಾಪಿ
ಪೂರ್ಣಾಯುಸ್ಸರ್ವಸಂಪದಃ ।
ಪಾಠಕಾನಾಂ ಚ ಪೂಜಾಯಾಂ
ಐಶ್ವರ್ಯಮತುಲಂ ಭವೇತ್ ॥

ಜಟಾ-ಘನವೇ ಮೊದಲಾದ ಅಷ್ಟವಿಕೃತಿಗಳನ್ನು ಪಾರಾಯಣ ಮಾಡುವ ವೈದಿಕಶ್ರೇಷ್ಠರು ವಿಪ್ರಪಂಕ್ತಿಯನ್ನೇ ಪಾವನಗೊಳಿಸುವ ಮಹಾತ್ಮರೇ ಸರಿ. ಯಾವ ದ್ವಿಜೋತ್ತಮನು ಒಂದು ಆವರ್ತಿ ಘನ ಪಾರಾಯಣವನ್ನು ಮಾಡುತ್ತಾನೆಯೋ, ಅವನು ಬ್ರಹ್ಮ ವಿಷ್ಣು ರುದ್ರರಿಗೆ ಸಮನೆನಿಸುತ್ತಾನೆ. ಜಟಾಪಾಠವನ್ನು ತಿಳಿದವನು ಬ್ರಹ್ಮನೂ, ಸಂಧಿಗಳನ್ನು ತಿಳಿದವನು ವಿಷ್ಣುವೂ, ಸರ್ವಸಂಧಿವೇತ್ತನು ಈಶ್ವರನೂ ಆಗುತ್ತಾನೆಂದು ಋಷಿಗಳು ಅಭಿಪ್ರಾಯ ನೀಡಿದ್ದಾರೆ. ಜಟಾದಿ ಪಾರಾಯಣ ಕರ್ತೃಕನಿಗೆ ಕೋಟಿಜನ್ಮದ ಪಾಪಗಳೂ ನಾಶಹೊಂದುತ್ತವೆ. ಈ ಪಾರಾಯಣವನ್ನು ಭಕ್ತಿಯಿಂದ ಶ್ರವಣ ಮಾಡುವವನಿಗೆ ಸಹಸ್ರ ಗೋದಾನ ಫಲವೂ ಪ್ರಾಪ್ತಿಯಾಗುವುದು. ಜಟಾಪಾಠಿಯನ್ನು ಶ್ರದ್ಧೆಯಿಂದ ಯಾರು ಗೌರವಿಸುತ್ತಾರೆಯೋ ಅವರು ಬ್ರಹ್ಮಸ್ಥಾನವನ್ನು-ಶಿವಸ್ಥಾನವನ್ನು ಹೊಂದುವರು. ಜಟಾದಿ ವಿಕೃತಿಗಳನ್ನು

ಪಾಠ ಮಾಡುವವರು ಮತ್ತು ಶ್ರವಣ ಮಾಡುವವರು ಪೂರ್ಣಾಯುಸ್ಸು ಮತ್ತು ಸಕಲ ಸಂಪತ್ತನ್ನೂ ಹೊಂದುವರು. ಸಂಹಿತಾ ಪಾಠದಿಂದ ಎಷ್ಟು ಪುಣ್ಯ ಪ್ರಾಪ್ತಿಯೋ, ಪದಪಾಠದಿಂದ ದ್ವಿಗುಣ, ಕ್ರಮಪಾಠದಿಂದ ಚತುರ್ಗುಣ, ವರ್ಣಕ್ರಮಪಾಠದಿಂದ ಶತಗುಣ, ಜಟಾಪಾಠದಿಂದ ಸಹಸ್ರಗುಣ ಇತ್ಯಾದಿ ಕ್ರಮದಲ್ಲಿ ವೇದಪಾಠದ ಪಾರಾಯಣ–ಶ್ರವಣಗಳ ಮಹತ್ವ–ಫಲಶ್ರುತಿಗಳು ಶಿಕ್ಷಾದಿ ಗ್ರಂಥಗಳಲ್ಲಿ ನಿರೂಪಿತವಾಗಿದೆ.

ಅದರಂತೆ ೨೦೧೮ನೇ ಡಿಸೆಂಬರ್ ೫ರಿಂದ ೧೯ರವರೆಗೆ **"ಕೃಷ್ಣಯಜುರ್ವೇದ ಸಂಪೂರ್ಣ ಜಟಾಪಾರಾಯಣ"** ಸಂಪನ್ನವಾಗಲಿದೆ. ಹಾಗೇಯೇ ಡಿಸೆಂಬರ್ ೨೦ ಮತ್ತು ೨೧ರಂದು ಮಹಾರುದ್ರಾನುಷ್ಠಾನವು ಸಂಪನ್ನವಾಗಲಿದೆ. ಈ ಕಾರ್ಯಕ್ರಮಗಳಿಗೆ ಗುರುಭಕ್ತರು ದಯಮಾಡಿ ತಮ್ಮ ತನು–ಮನ–ಧನ ಸೇವೆಯನ್ನು ಸಲ್ಲಿಸಿ ಕೃತಾರ್ಥರೂ, ಧನ್ಯರೂ ಆಗಬೇಕಾಗಿ ವಿನಂತಿ.

---

**॥ ಓಂ ನಮೋ ಭಗವತೇ ಶ್ರೀಧರಾಯ ॥**

**ಶ್ರೀಗುರುಭಕ್ತರಲ್ಲಿ ವಿಜ್ಞಾಪನೆಗಳು,**

ಸ್ವಸ್ತಿ ಶ್ರೀ ನೃಪ ಶಾಲಿವಾಹನ ಶಕೆ ೧೯೪೧ ನೇ ಶ್ರೀ ವಿಳಂಬಿನಾಮ ಸಂವತ್ಸರದ ಮಾರ್ಗಶೀರ್ಷ ಮಾಸ ಶುಕ್ಲ ಪಕ್ಷ ೯ ಯು **ಡಿಸೆಂಬರ್ ೧೬: ೨೦೧೮** ನೇ ಭಾನುವಾರದಿಂದ ಮಾರ್ಗಶೀರ್ಷ ಬಹುಳ ೧ಯು **ಡಿಸೆಂಬರ್ ೨೩: ೨೦೧೮** ನೇ ಭಾನುವಾರದವರೆಗೆ ಶ್ರೀ ಶ್ರೀಧರಾಶ್ರಮ, ಶ್ರೀಕ್ಷೇತ್ರ ವರದಪುರದಲ್ಲಿ ಶ್ರೀ ದತ್ತ ಜಯಂತಿ ಮತ್ತು ಶ್ರೀಮತ್ಪರಮಹಂಸ ಪರಿವ್ರಾಜಕಾಚಾರ್ಯ ಸದ್ಗುರು ಭಗವಾನ್ ಶ್ರೀ ಶ್ರೀಧರಸ್ವಾಮಿಗಳವರ **೧೧೦** ನೇ ಜಯಂತಿ ಮಹೋತ್ಸವವನ್ನು ಪ್ರತಿವರ್ಷದಂತೆ ಈ ವರ್ಷವೂ ಕೂಡ ಭಕ್ತಾದಿಗಳ ಸೇವಾ ಸಹಕಾರಗಳಿಂದ ನೆರವೇರಿಸಲು ನಿಶ್ಚಯಿಸಲಾಗಿದೆ. ಆದ್ದರಿಂದ ಈ ಮಹೋತ್ಸವದಲ್ಲಿ ತಾವೆಲ್ಲರೂ ತನು ಮನ ಧನ ಧಾನ್ಯಗಳಿಂದ ಒಡಗೂಡಿಕೊಂಡು ಭಾಗವಹಿಸಿ, ಆಶ್ರಮದ ನಿಯಮದಂತೆ ವರ್ತಿಸಿ, ತೀರ್ಥ ಪ್ರಸಾದವನ್ನು ಸ್ವೀಕರಿಸಿ, ಶ್ರೀ ಸದ್ಗುರು ಕೃಪಾಶೀರ್ವಾದಗಳಿಗೆ ಪಾತ್ರರಾಗಬೇಕಾಗಿ ಅಪೇಕ್ಷಿಸುತ್ತೇವೆ.

**ಶ್ರೀ ಶ್ರೀಧರ ಸೇವಾ ಮಹಾಮಂಡಲ(ರಿ.)**
**ಶ್ರೀ ಶ್ರೀಧರಾಶ್ರಮ–ಶ್ರೀಕ್ಷೇತ್ರ ವರದಪುರ**

## ನಿತ್ಯದ ಕಾರ್ಯಕ್ರಮಗಳು

ಶ್ರೀ ಸದ್ಗುರು ಸಮಾಧಿಗೆ ಫಲ–ಪಂಚಾಮೃತ ಸಹಿತ ಏಕಾದಶ ರುದ್ರ, ಪುರುಷಸೂಕ್ತ ಅಭಿಷೇಕಪೂರ್ವಕ ಕಲ್ಪೋಕ್ತ ಮಹಾಪೂಜೆ; ವೇದ, ಉಪನಿಷತ್, ಶ್ರೀಗುರುಚರಿತ್ರೆ, ಶ್ರೀಗುರುಗೀತಾ, ಭಗವದ್ಗೀತಾ, ಶ್ರೀದತ್ತಸ್ತವರಾಜ ಇವುಗಳ ಪಾರಾಯಣ; ಶ್ರೀದತ್ತಮಂತ್ರ, ಶ್ರೀಗುರುಮಂತ್ರಗಳ ಜಪಾನುಷ್ಠಾನ; ಪುರಾಣ–ಪ್ರವಚನ, ಭಜನೆ–ಕೀರ್ತನೆ ಇತ್ಯಾದಿ.

## ವಿಶೇಷ ಕಾರ್ಯಕ್ರಮಗಳು

ಡಿಸೆಂಬರ್ 16; 2018 ನೇ ಭಾನುವಾರ
ಮಾರ್ಗಶೀರ್ಷ ಶುಕ್ಲ ನವಮಿ

ಶ್ರೀಗುರುಗಣಪತಿ ಪೂಜನ, ಪುಣ್ಯಾಹ,
ಪಂಚಗವ್ಯ ಪ್ರಾಯಶ್ಚಿತ್ತ ಪೂರ್ವಕ ಋತ್ವಿಗ್ವರಣ,
ಶ್ರೀ ಗಣಪತಿ ಉಪನಿಷತ್ ಹವನ

ಡಿಸೆಂಬರ್ 17; 2018 ನೇ ಸೋಮವಾರ
ಮಾರ್ಗಶೀರ್ಷ ಶುಕ್ಲ ದಶಮಿ

ಶ್ರೀ ಅತಿವಿಷ್ಣು ಮಹಾಯಾಗ

ಡಿಸೆಂಬರ್ 18; 2018 ನೇ ಮಂಗಳವಾರ
ಮಾರ್ಗಶೀರ್ಷ ಶುಕ್ಲ ಏಕಾದಶಿ

ಶ್ರೀ ಗೀತಾಜಯಂತಿ ನಿಮಿತ್ತ
ಸಾಮೂಹಿಕ ಭಗವದ್ಗೀತಾ ಪಠಣ, ಪ್ರವಚನ
**(ಸಮಯ : ಮಧ್ಯಾಹ್ನ 3 ಗಂಟೆ)**

ಡಿಸೆಂಬರ್ 19; 2018 ನೇ ಬುಧವಾರ
ಮಾರ್ಗಶೀರ್ಷ ಶುಕ್ಲ ದ್ವಾದಶಿ

ಶ್ರೀ ಮಹಾವಿಷ್ಣು ದ್ವಾದಶಾಕ್ಷರಿ ಮೂಲಮಂತ್ರ ಹವನ

ಡಿಸೆಂಬರ್ 20; 2018 ನೇ ಗುರುವಾರ
ಮಾರ್ಗಶೀರ್ಷ ಶುಕ್ಲ ತ್ರಯೋದಶಿ

ಶ್ರೀ ಗಂಗಾ ಮೂಲಮಂತ್ರ ಹವನ
ಸಂಜೆ ಪಾಲಕೀ ಉತ್ಸವ ಮತ್ತು ಅಷ್ಟಾವಧಾನ ಸೇವೆ

ಡಿಸೆಂಬರ್ 21; 2018ನೇ ಶುಕ್ರವಾರ
ಮಾರ್ಗಶೀರ್ಷ ಶುಕ್ಲ ಚತುರ್ದಶಿ

ಶ್ರೀ ಸುದರ್ಶನ ಮಂತ್ರ ಸಹಿತ ಲಕ್ಷ್ಮೀ ನರಸಿಂಹ
ಮೂಲಮಂತ್ರ ಹವನ
ಸಂಜೆ ಪಾಲಕೀ ಉತ್ಸವ ಮತ್ತು ಅಷ್ಟಾವಧಾನ ಸೇವೆ

ಡಿಸೆಂಬರ್ 22; 2018ನೇ ಶನಿವಾರ
ಮಾರ್ಗಶೀರ್ಷ ಶುಕ್ಲ ಪೂರ್ಣಿಮಾ

ಶ್ರೀ ದತ್ತಮಂತ್ರ ಮತ್ತು ಶ್ರೀಗುರುಮಂತ್ರಗಳಿಂದ ಹವನ,
ಸಂಜೆ ಶ್ರೀ ಸತ್ಯದತ್ತವ್ರತ ಪೂಜೆ, ಶ್ರೀ ಸದ್ಗುರು ಸಮಾಧಿಗೆ
ಶತರುದ್ರಾಭಿಷೇಕ, ಸಹಸ್ರ ತುಳಸೀ ಅರ್ಚನಾ ಪೂರ್ವಕ ಕಲ್ಪೋಕ್ತ
ಮಹಾಪೂಜೆ, ಶ್ರೀ ದತ್ತ ಶ್ರೀ ಶ್ರೀ ಪ.ಪ. ಸದ್ಗುರು ಭಗವಾನ್
ಶ್ರೀ ಶ್ರೀಧರಸ್ವಾಮಿಗಳವರ ಜನ್ಮೋತ್ಸವ, ಪಾಲಕೀ ಉತ್ಸವ ಮತ್ತು
ಅಷ್ಟಾವಧಾನ ಸೇವೆ, ಮಹಾಮಂಗಳಾರತಿ

ಡಿಸೆಂಬರ್ 23; 2018 ನೇ ಭಾನುವಾರ
ಮಾರ್ಗಶೀರ್ಷ ಬಹುಳ ಪ್ರತಿಪತ್

ಶ್ರೀದತ್ತಮಂತ್ರ ಮತ್ತು ಶ್ರೀಗುರುಮಂತ್ರ ಹವನಗಳ ಪೂರ್ಣಾಹುತಿ,
ಮಹಾಮಂಗಳಾರತಿ, ಮಂತ್ರಾಕ್ಷತಾ ವಿನಿಯೋಗ, ಮಂಗಳಮ್

**~ಸರ್ವರಿಗೂ ಆದರದ ಸ್ವಾಗತ~**

## ಸಾಂಸ್ಕೃತಿಕ ಕಾರ್ಯಕ್ರಮಗಳು

ದಿನಾಂಕ : 16-12-2018ರ ಭಾನುವಾರ ಮಧ್ಯಾಹ್ನ 4 ರಿಂದ
"ಭಕ್ತಿ ಗೀತೆಗಳು"
ನಡೆಸಿಕೊಡುವವರು : ವಿದುಷಿ ಶ್ರೀಮತಿ ನಾಗಚಂದ್ರಿಕಾ ಭಟ್, ಬೆಂಗಳೂರು

ದಿನಾಂಕ : 17-12-2018ರ ಸೋಮವಾರ ಮಧ್ಯಾಹ್ನ 4 ರಿಂದ
"ದಾಸವಾಣಿ"
ನಡೆಸಿಕೊಡುವವರು : ಡಾ॥ಶ್ರೀಧರ ಕುಲಕರ್ಣಿ ಮತ್ತು
ವಿದುಷಿ ಶ್ರೀಮತಿ ಶ್ರುತಿ ಶ್ರೀಧರ ಕುಲಕರ್ಣಿ, ಧಾರವಾಡ

ದಿನಾಂಕ : 18-12-2018ರ ಮಂಗಳವಾರ ಮಧ್ಯಾಹ್ನ 4 ರಿಂದ
"ಕರ್ನಾಟಕ ಶಾಸ್ತ್ರೀಯ ವಾದ್ಯ ಸಂಗೀತ"
ನಡೆಸಿಕೊಡುವವರು : ವಿದ್ವಾನ್ ಎ.ವಿ.ದತ್ತಾತ್ರೇಯ ಮೈಸೂರು
ಮತ್ತು ವೃಂದದವರು

ದಿನಾಂಕ : 19-12-2018ರ ಬುಧವಾರ ಮಧ್ಯಾಹ್ನ 4 ರಿಂದ
"ಭಕ್ತಿ ಗೀತೆಗಳ ಗಾಯನ"
ನಡೆಸಿಕೊಡುವವರು : ವಿದುಷಿ ಶ್ರೀಮತಿ ವಾಣಿ ಹರ್ಡಿಕರ್ ಮತ್ತು
ವೃಂದದವರು

ದಿನಾಂಕ : 20-12-2018ರ ಗುರುವಾರ ಮಧ್ಯಾಹ್ನ 4 ರಿಂದ
"ಶಾಸ್ತ್ರೀಯ ಭಕ್ತಿ ಸಂಗೀತ"
ನಡೆಸಿಕೊಡುವವರು : ವಿದ್ವಾನ್ ಶ್ರೀಧರ ಹೆಗಡೆ, ದಾಸನಕೊಪ್ಪ, ಶಿರಸಿ
ಮತ್ತು ಸಂಗಡಿಗರು

ದಿನಾಂಕ : 21-12-2018ರ ಶುಕ್ರವಾರ ಮಧ್ಯಾಹ್ನ 4 ರಿಂದ
"ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತ"
ನಡೆಸಿಕೊಡುವವರು : ವಿದುಷಿ ಶ್ರೀಮತಿ ವಸುಧಾ ಶರ್ಮಾ ಹಳೆಇಕ್ಕೇರಿ
ಮತ್ತು ವೃಂದದವರು.

ರಾತ್ರಿ 8ರಿಂದ
"ಭರತನಾಟ್ಯ"
ನಡೆಸಿಕೊಡುವವರು : ವಿದ್ವಾನ್ ಶ್ರೀ ಎಂ.ಗೋಪಾಲ್ ಮತ್ತು ಶಿಷ್ಯವೃಂದ,
ಪರಿಣಿತಿ ಕಲಾಕೇಂದ್ರ, ಸಾಗರ.

ದಿನಾಂಕ : 23-12-2018ರ ಭಾನುವಾರ ಮಧ್ಯಾಹ್ನ 4ಕ್ಕೆ
"ಕರ್ನಾಟಕ ಸಂಗೀತ"
ಶ್ರೀಮತಿ ಡಾ॥ ಭಾಗ್ಯ ಮೂರ್ತಿ, ಸಿಂಗಾಪುರ ಮತ್ತು ವೃಂದದವರು.